


# ಉದಯವಾಣಿ

ಜನಮನದ ಜೀವನಾಡಿ

ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ

Regd.No.UDP/1259/2015-17 | udayavani.com | UDAYAVANI – KANNADA DAILY – MANIPAL ಮಣಿಪಾಲ, ಶನಿವಾರ, ಫೆಬ್ರವರಿ 25, 2017 ಬೆಲೆ: ₹ 4-00 ವಿದೇಶ ಬೆಲೆ: ₹ 5-00 ಪುಟಗಳು 14+4




# ನಾಯಕತ್ವ ಅಭಿವೃದ್ಧಿಯಲ್ಲಿ ಎಚ್‌ಆರ್ ಪಾತ್ರ ಮಹತ್ತರ

## ಸಹ್ಯಾದ್ರಿ ಕಾಲೇಜಿನಲ್ಲಿ ವಿಚಾರ ಸಂಕಿರಣ ಉದ್ಘಾಟಿಸಿ ಪ್ರಭಾಕರ ರಾವ್

ಮಂಗಳೂರು, ಫೆ. 24: ನಾಯಕತ್ವ ಅಭಿವೃದ್ಧಿಯಲ್ಲಿ ಮಾನವ ಸಂಪನ್ಮೂಲ ವಿಭಾಗದ ಪಾತ್ರ ಮಹತ್ತರವಾಗಿದ್ದು ಅದು ಪ್ರತಿ ಸಂಸ್ಥೆಗಳ ಸಿಬಂದಿಯ ಸರ್ವಾಂಗೀಣ ಅಭಿವೃದ್ಧಿಯತ್ತ ಗಮನ ಹರಿಸುತ್ತದೆ. ಹೀಗಾಗಿ ಒಂದು ಸಂಸ್ಥೆಯ ಬೆಳವಣಿಗೆಗೆ ಈ ವಿಭಾಗದ ಕೊಡುಗೆ ಅಪಾರ ಎಂದು ಎಂಸಿಎಫ್‌ನ ನಿರ್ದೇಶಕ ಕೆ. ಪ್ರಭಾಕರ ರಾವ್ ಅಭಿಪ್ರಾಯ ಪಟ್ಟರು.




**ಕಾರ್‌ಡೋಲೈಟ್ ಸ್ಪೆಷಾಲಿಟಿ ಕೆಮಿಕಲ್ ಇಂಡಿಯಾ ಲಿಮಿಟೆಡ್ ನ ಪಾಲುದಾರ ಶೈಲೇಂದ್ರ ಭಟ್‌ಕಂಡೆ ಮಾತನಾಡಿದರು.**

ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಪೀಪಲ್ ಮ್ಯಾನೇಜ್‌ಮೆಂಟ್ ಹಾಗೂ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್‌ನ ಬ್ಯುಸಿನೆಸ್ ಅಡ್ಮಿನ್‌ಸ್ಟ್ರೇಶನ್ ವಿಭಾಗದ ವತಿಯಿಂದ ಕಾಲೇಜು ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಲಾದ ಪ್ರಸಕ್ತ ಮಾನವ ಸಂಪನ್ಮೂಲ ಸದ್ಬಳಕೆ ಮತ್ತು ಕಾರ್ಮಿಕ ಕಾನೂನು ವ್ಯವಸ್ಥೆಯಲ್ಲಿ ವ್ಯವಹಾರ ಕೌಶಲಗಳ ಅಭಿವೃದ್ಧಿ ವಿಚಾರದ ಕುರಿತು ನಡೆದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸವಾಲುಗಳನ್ನು ಸಮಸ್ಯೆ ಎಂದು ಪರಿಗಣಿಸಿ ಅದಕ್ಕೆ ಪರಿಹಾರ ಹುಡುಕುವ ಪ್ರಯತ್ನ ಮಾಡುವವನು ಉತ್ತಮ ಮಾನವ ಸಂಪನ್ಮೂಲ ಅಧಿಕಾರಿ ಎಂದೆನಿಸಿಕೊಳ್ಳುತ್ತಾನೆ ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ| ಉಮೇಶ್ ಎಂ. ಭೂಶಿ ಮಾತನಾಡಿ, ಹೆಚ್ಚಾದ ಕೆಲಸದ ಒತ್ತಡದಿಂದಾಗಿ ಬಹುತೇಕರು ಅದನ್ನು ಸಂತೋಷದಿಂದ ಮಾಡುತ್ತಿಲ್ಲ, ಇದರಿಂದ ಕೆಲಸದಲ್ಲಿ ಬದ್ಧತೆ ಇರುವುದಿಲ್ಲ ಎಂದರು.

ಕಾರ್‌ಡೋಲೈಟ್ ಸ್ಪೆಷಾಲಿಟಿ ಕೆಮಿಕಲ್ ಇಂಡಿಯಾ ಲಿಮಿಟೆಡ್‌ನ ಪಾಲುದಾರ ಶೈಲೇಂದ್ರ ಭಟ್‌ಕಂಡೆ ಅಧ್ಯಕ್ಷತೆ ವಹಿಸಿದ್ದರು.

ಎಸ್‌ಡಿಎಂ ಪಿಜಿ ಸೆಂಟರ್‌ನ ನಿರ್ದೇಶಕ ಡಾ| ದೇವರಾಜ್ ಕೆ., ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್ ಮೆಂಟ್‌ನ ಬ್ಯುಸಿನೆಸ್ ಅಡ್ಮಿನ್‌ಸ್ಟ್ರೇಶನ್ ನಿರ್ದೇಶಕಿ ಡಾ| ವಿಶಾಲ್ ಸಮರ್ಥ ಮೊದಲಾದವರು ಉಪಸ್ಥಿತರಿದ್ದರು.

ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಪೀಪಲ್ ಮ್ಯಾನೇಜ್‌ಮೆಂಟ್ ನ ಅಧ್ಯಕ್ಷ ಪಿ.ಸುರೇಶ್ ಸ್ವಾಗತಿಸಿದರು. ಸಂಯೋಜಕಿ ಪ್ರೊ| ಸುಷ್ಮಾ ವಿ. ವಂದಿಸಿದರು. ಸುಪ್ರಿತಾ ನಿರೂಪಿಸಿದರು.

ಶನಿವಾರ, ಫೆಬ್ರುವರಿ 25, 2017 | ಮಂಗಳೂರು | ₹ 5.00 | ಪುಟ 22 + 2 | ಸಂಪುಟ 20 | ಸಂಚಿಕೆ 56

goo.gl/S62nF1 /prajavani.net @praja

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

Sahyadri College of Engineering & Management
CENTRAL LIBRARY

ಭೂಮಿಕಾ
ಪತಿ–ಪತ್ನಿ, ಅವಳು ಮತ್ತು ಕೋರ್ಟ್!




ಸಹ್ಯಾದ್ರಿ ಕಾಲೇಜಿನಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ವಿಚಾರ ಸಂಕಿರಣದಲ್ಲಿ ಶೈಲೇಂದ್ರ ಭಟ್ಕಾಂಡೆ ಮಾತನಾಡಿದರು. ಎಂಸಿಎಫ್ ನಿರ್ದೇಶಕ ಕೆ. ಪ್ರಭಾಕರ್ ರಾವ್, ಪ್ರಾಚಾ ರ್ಯ ಡಾ. ಉಮೇಶ ಎಂ. ಭೂಶಿ ಇದ್ದರು.

# ಮಾನವ ಸಂಪನ್ಮೂಲದ ಪಾತ್ರ ದೊಡ್ಡದು: ರಾವ್

ಮಂಗಳೂರು: ಉದ್ದಿಮೆಗಳ ಅಭಿವೃದ್ಧಿಯಲ್ಲಿ ಮಾನವ ಸಂಪನ್ಮೂಲದ ವ್ಯಾವಹಾರಿಕ ಕೌಶಲಗಳು ವಿಶಿಷ್ಟ ಪಾತ್ರ ನಿರ್ವಹಿಸುತ್ತವೆ ಎಂದು ಎಂಸಿಎಫ್ ನಿರ್ದೇಶಕ ಕೆ. ಪ್ರಭಾಕರ್ ರಾವ್ ಹೇಳಿದರು.

ಮಂಗಳೂರಿನಲ್ಲಿ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮ್ಯಾನೇಜ್ಮೆಂಟ್ ಹಾಗೂ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಪೀಪಲ್ ಮ್ಯಾನೇಜ್ಮೆಂಟ್ ಆಶ್ರಯದಲ್ಲಿ ಶುಕ್ರವಾರ ಸಹ್ಯಾದ್ರಿ ಕಾಲೇಜು ಸಭಾಂಗಣದಲ್ಲಿ ನಡೆದ 'ಪ್ರಸಕ್ತ ಮಾನವ ಸಂಪನ್ಮೂಲ ವೃತ್ತಿಯಲ್ಲಿ ವ್ಯವಹಾರ ಕೌಶಲ ಬಳಕೆ ಮತ್ತು ಕಾನೂನು' ಕುರಿತು ಹಮ್ಮಿಕೊಂಡಿದ್ದ ರಾಷ್ಟ್ರ ಮಟ್ಟದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೈಗಾರಿಕೆಗಳು ಮಾನವ ಸಂಪನ್ಮೂಲಗಳ ಮೇಲೆಯೇ ಹೆಚ್ಚು ಅವಲಂಬನೆ ಆಗಿದ್ದು, ಉದ್ದಿಮೆಗಳ ಅಳಿವು ಮತ್ತು ಉಳಿವು ಮಾನವ ಸಂಪನ್ಮೂಲವನ್ನೇ ನೆಚ್ಚಿಕೊಂಡಿವೆ. 25 ವರ್ಷಗಳ ಹಿಂದೆ ಇದ್ದಂತಹ ವ್ಯವಸ್ಥೆ ಇವತ್ತು ಇಲ್ಲ. ಕಾಲ ಬದಲಾವಣೆ ಆಗಿದೆ. ಎಲ್ಲ ಕ್ಷೇತ್ರಗಳಲ್ಲಿಯೂ ಸದೃಢ ಮಾನವ ಸಂಪನ್ಮೂಲ ತಂಡ ನಿರ್ಮಾಣಕ್ಕೆ ವ್ಯವಸ್ಥಾಪಕರ ನೇಮಕ ಮಾಡಲಾಗಿರುತ್ತದೆ. ಒಬ್ಬ ಮಾನವ ಸಂಪನ್ಮೂಲ ವ್ಯವಸ್ಥಾಪಕ ಒಟ್ಟು ಉದ್ದಿಮೆಯ ಚಿತ್ರಣ ಬದಲಾವಣೆ ಮಾಡಬಲ್ಲ ಸಾಮರ್ಥ್ಯ ಹೊಂದಿರುತ್ತಾನೆ ಎಂದು ಅವರು ಹೇಳಿದರು.

ಸ್ಪರ್ಧೆಯು ಎಲ್ಲ ಕ್ಷೇತ್ರಗಳಲ್ಲಿಯೂ ಇದೆ. ಇದನ್ನು ಯಾವ ರೀತಿಯಾಗಿ ಎದುರಿಸಬೇಕು ಎನ್ನುವ ಕೌಶಲವು ಅಗತ್ಯ. ಮಾನವ ಸಂಪನ್ಮೂಲವು ಗ್ರಾಹಕ, ಸಂವಹನ, ವೆಚ್ಚ ಮತ್ತು ಬಂಡವಾಳ ಎಲ್ಲ ಗುರಿಗಳನ್ನು ಸಾಧಿಸುವುದಕ್ಕೆ ಸವಾಲಿನ ಪಾತ್ರ ನಿರ್ವಹಣೆ ಮಾಡುತ್ತದೆ. ಈ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತವಾಗುವುದು ಅವಶ್ಯ ಕೂಡಾ ಇದೆ ಎಂದು ಅವರು ಹೇಳಿದರು.

ಕಾರ್ಡೋರ್‌ಲೈಟ್ ಸ್ಪೆಶಾಲಿಟಿ ಕೆಮಿಕಲ್ಸ್ ಇಂಡಿಯಾ ಎಲ್‌ಎಲ್‌ಪಿ ವ್ಯವಸ್ಥಾಪಕ ಪಾಲುದಾರರಾದ ಶೈಲೇಂದ್ರ ಭಟ್ಕಾಂಡೆ ಅಧ್ಯಕ್ಷತೆ ವಹಿಸಿ ಮಾತನಾಡಿ, ಇವತ್ತು ಪ್ರತಿಯೊಂದು ಉದ್ಯಮವು ಮಾನವ ಸಂಪನ್ಮೂಲವನ್ನೇ ಅವಲಂಬಿಸಿದೆ ಎಂದರು.

ಸಹ್ಯಾದ್ರಿ ಕಾಲೇಜಿನ ಪ್ರಾಚಾರ್ಯ ಡಾ. ಉಮೇಶ ಎಂ. ಭೂಶಿ ಮಾತನಾಡಿದರು. ಬಿಎಎಸ್ ಎಫ್ ಎಚ್‌ಆರ್ ನಿರ್ದೇಶಕಿ ಹಾಗೂ ಮುಖ್ಯಸ್ಥೆ ಡಾ. ಲಕ್ಷ್ಮೀ ನಾಡಕರ್ಣಿ, ಡಾ. ದೇವರಾಜ್, ಎನ್‌ಐಪಿಎಂ ಅಧ್ಯಕ್ಷ ಹಾಗೂ ಪಣಂಬೂರು ಎಂಸಿಎಫ್ ಮಾನವ ಸಂಪನ್ಮೂಲ ಹಾಗೂ ಆಡಳಿತ ಮುಖ್ಯ ವ್ಯವಸ್ಥಾಪಕ ಪಿ.ಸುರೇಶ್, ಚಾರ್ಲ್ಸ್ ಕಾರ್ವಾಲೋ ಸೇರಿದಂತೆ ಹಲವರು ವಿಚಾರ ಸಂಕಿರಣದಲ್ಲಿ ಪಾಲ್ಗೊಂಡಿದ್ದರು. ವಿದ್ಯಾರ್ಥಿಗಳು ಇದ್ದರು.

~ಮುಂಜಾನೆ ಮಾತು~
ಯಾರೂ ಪರಿಪೂರ್ಣರಲ್ಲ. ಹಾಗಾಗಿ ಸಣ್ಣಪುಟ್ಟ ತಪ್ಪಿಗಾಗಿ ಸಂಬಂಧವನ್ನೇ ಹಾಳುಮಾಡಿಕೊಳ್ಳುವದು ಸಲ್ಲ. ತಪ್ಪುಗಳನ್ನು ಮನ್ನಿಸಿ ಸಂಬಂಧಗಳನ್ನು ನವೀಕರಿಸಿಕೊಳ್ಳಬೇಕು.

# ವಿಜಯವಾಣಿ

ಕನ್ನಡಿಗರ ಧ್ವನಿ

ನಂ.1* ಕನ್ನಡ ದಿನಪತ್ರಿಕೆ




ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ VIJAYAVANI • MANGALURU ಮಂಗಳೂರು • ಸಂಪುಟ 5 • ಸಂಚಿಕೆ 327

vijayavani.net ಇ-ಪೇಪರ್: epapervijayavani.in VVani4U @VVANI4U vijayavaninews@gmail.com ಸಹಾಯವಾಣಿ: 8884411682 25 ಫೆಬ್ರವರಿ 2017 | ಶನಿವಾರ 25 FEBRU


Sahyadri College of Engineering & Management CENTRAL LIBRARY Adyar, Mangalore


# ಉದ್ಯಮದಲ್ಲಿ ಎಚ್‌ಆರ್‌ಗಳ ಜವಾಬ್ದಾರಿ ಹೆಚ್ಚು

## ಸಹ್ಯಾದ್ರಿ ಕಾಲೇಜಿನಲ್ಲಿ ರಾಷ್ಟ್ರೀಯ ಕಾರ್ಯಾಗಾರ ಉದ್ಘಾಟಿಸಿ ಎಂಸಿಎಫ್ ನಿರ್ದೇಶಕ ಕೆ.ಪ್ರಭಾಕರ ರಾವ್ ಹೇಳಿಕೆ

**ವಿಜಯವಾಣಿ ಸುದ್ದಿಜಾಲ** ಮಂಗಳೂರು

25 ವರ್ಷಗಳ ಹಿಂದೆ ಉದ್ದಿಮೆಗಳಲ್ಲಿರುವ ಎಚ್ ಆರ್ ಉದ್ಯೋಗಿಗಳನ್ನು ಇಂಡಸ್ಟ್ರಿಯಲ್ ರಿಲೇಷನ್ ಮ್ಯಾನೇಜರ್ ಎಂದು ಹೇಳುತ್ತಿದ್ದರು. ಆದರೆ ಇಂದು ಇಂಡಸ್ಟ್ರಿಯಲ್ ರಿಲೇಷನ್ ಮಾನೇಜ್ ಮೆಂಟ್‌ನಿಂದ ಪರ್ಸನಲ್ ಮ್ಯಾನೇಜ್‌ಮೆಂಟ್‌ಗೆ ಬದಲಾಗಿದೆ. ಸಂಸ್ಥೆಗೆ ಉದ್ಯೋಗಿಗಳ ಆಯ್ಕೆ, ಅವರ ಕಾರ್ಯದಕ್ಷತೆ ಸೇರಿದಂತೆ ಎಲ್ಲ ವಿಷಯಗಳನ್ನೂ ನೋಡಿಕೊಳ್ಳಬೇಕಾಗಿದೆ ಎಂದು ಎಂಸಿಎಫ್ ನಿರ್ದೇಶಕ ಕೆ.ಪ್ರಭಾಕರ ರಾವ್ ಹೇಳಿದರು.

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಪೀಪಲ್ ಮ್ಯಾನೇಜ್‌ಮೆಂಟ್ ಮಂಗಳೂರು ಘಟಕ ಹಾಗೂ ಅಡ್ಯಾರ್ ಸಹ್ಯಾದ್ರಿ ಕಾಲೇಜ್ ಆಫ್ ಇಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್ ವತಿಯಿಂದ ಶುಕ್ರವಾರ ಕಾಲೇಜಿನಲ್ಲಿ ಆಯೋಜಿಸಲಾದ ಒಂದು ದಿನದ 'ಲಿವರೇಜಿಂಗ್ ಬಿಜಿನೆಸ್ ಸ್ಕಿಲ್ಸ್ ಇನ್ ಲೈನ್ ವಿದ್ ಕರೆಂಟ್ ಎಚ್‌ಆರ್ ಟ್ರೆಂಡ್ಸ್ ಆ್ಯಂಡ್ ಎಂಪ್ಲಾಯಿ ಲಾಸ್' ರಾಷ್ಟ್ರೀಯ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.





ವಿಜಯವಾಣಿ

ಅಡ್ಯಾರ್ ಸಹ್ಯಾದ್ರಿ ಕಾಲೇಜಿನಲ್ಲಿ ರಾಷ್ಟ್ರೀಯ ಕಾರ್ಯಾಗಾರವನ್ನು ಕೆ.ಪ್ರಭಾಕರ ರಾವ್ ಉದ್ಘಾಟಿಸಿದರು.

ಸಂಸ್ಥೆಯ ಸಂಪೂರ್ಣ ಆಗುಹೋಗು ವಿಶ್ಲೇಷಿಸುವುದು, ಮಾನವ ಬಂಡವಾಳ ಹತೋಟಿಯಲ್ಲಿಡುವ ಮೂಲಕ ಸಂಸ್ಥೆ ಉತ್ತಮವಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಬೇಕಾದುದು ಕರ್ತವ್ಯವಾಗಿದೆ. ಉತ್ತಮ ನಾಯಕರನ್ನು ನಿರ್ಮಿಸುವುದರ ಜತೆಗೆ ಸಂಸ್ಥೆಯಲ್ಲಿ ಉತ್ತಮ ಸಂಸ್ಕೃತಿ ಮತ್ತು ಮೌಲ್ಯ ಜಾರಿಗೆ ತಂದು ಸಂಸ್ಥೆಗಳಲ್ಲಿ ಬದಲಾವಣೆ ತರುವುದು ಅವರ ಜವಾಬ್ದಾರಿ ಎಂದು ಹೇಳಿದರು.

ಕಾರ್ಡೋರ್‌ಲೈಟ್ ಸ್ಪೆಷಾಲಿಟಿ ಕೆಮಿಕಲ್ಸ್ ಇಂಡಿಯಾದ ಮ್ಯಾನೇಜಿಂಗ್ ಶೈಲೇಂದ್ರ ಭಟ್ಕಂಡೆ ಅಧ್ಯಕ್ಷತೆ ವಹಿಸಿದ್ದರು.

ಬಿಎಎಸ್‌ಎಫ್ ಮಾನವ ಸಂಪನ್ಮೂಲ ವಿಭಾಗ ನಿರ್ದೇಶಕಿ ಡಾ.ಲಕ್ಷ್ಮೀ ನಾಡಕರ್ಣಿ ದಿಕ್ಸೂಚಿ ಭಾಷಣ ಮಾಡಿದರು. ಎಸ್‌ಡಿಎಂ ಪಿಜಿ ಸೆಂಟರ್ ನಿರ್ದೇಶಕ ಡಾ.ದೇವರಾಜ್ ಕೆ., ಸಹ್ಯಾದ್ರಿ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜು ಪ್ರಾಂಶುಪಾಲ ಉಮೇಶ್ ಭೂಷಿ, ಉದ್ಯಮಾಡಳಿತ ವಿಭಾಗ ನಿರ್ದೇಶಕಿ ಡಾ. ವಿಶಾಲ್ ಸಮರ್ಥ ಉಪಸ್ಥಿತರಿದ್ದರು.

ಎಂಸಿಎಫ್ ಎಚ್‌ಆರ್ ಮ್ಯಾನೇಜರ್, ಎನ್ಐಪಿಎಂ ಅಧ್ಯಕ್ಷ ಪಿ.ಸುರೇಶ್ ಸ್ವಾಗತಿಸಿ, ಕಾರ್ಯಕ್ರಮ ಸಂಚಾಲಕಿ ಉಪನ್ಯಾಸಕಿ ಪ್ರೊ.ಸುಷ್ಮಾ ವಿ. ವಂದಿಸಿದರು. ವಿದ್ಯಾರ್ಥಿನಿ ಸುಪ್ರೀತಾ ಕಾರ್ಯಕ್ರಮ ನಿರೂಪಿಸಿದರು.

> ದೇಶದಲ್ಲಿ ಜಾರಿಯಲ್ಲಿರುವ ಕಾರ್ಖಾನೆ ಕಾನೂನು, ಕಾರ್ಮಿಕ ಕಾನೂನು ಮೊದಲಾದವು ನೂರಾರು ವರ್ಷದ ಹಿಂದಿನದಾಗಿದ್ದು ಬ್ರಿಟಿಷರ ಕಾಲದಲ್ಲಿ ಜಾರಿಯಲ್ಲಿದ್ದವು. ಆದ್ದರಿಂದ ಈ ಕಾನೂನು ಬದಲಾವಣೆಯಾಗಬೇಕಾದ ಅವಶ್ಯಕತೆಯಿದೆ.
>
> | ಕೆ.ಪ್ರಭಾಕರ ರಾವ್ ಎಂಸಿಎಫ್ ನಿರ್ದೇಶಕ

BENNETT, COLEMAN & CO. LTD. | ESTABLISHED 1838 | TIMESOFINDIA.COM | EPAPER.TIMESOFINDIA.COM MANGALURU | SATURDAY, FEBRUARY 25, 2017 | PAGES 20 | PRICE ₹ 5



THE TIMES OF INDIA

INCLUDES 4 PAGES OF MANGALORE TIMES* (FOR MANGALURU, MANIPAL AND UDUPI CITY AREAS ONLY)

**National conference:** National Institute of People Management (NIPM) and Sahyadri College of Engineering & Management organised a national conference on 'Leveraging Business Skills in line with current HR Trends and Employee Laws' on Friday. This conference was designed to empower the HR professionals and HR aspirants to equip themselves to innovative practices in order to assimilate and accept the changing business strategies. The programme intended to drive the professional development of the participants and inspire them to thrive in the ever-evolving new age. Suresh P, chairman- NIPM, said the purpose of NIPM was to provide a platform to HR practioners to reorient themselves to dynamic business world and to become a change agent for continuous development of the organization.